Reg No. M 1299 (Founded 1917) Daily & Weekly

ಸತ್ಯವಾದಿ

(ಆಲಮನೆ ಸಿರಸ್ತೇದರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 28 ಸಂಚಿಕೆ 193] ಗುರುವಾರ 26—4—45 [3 ಪೈ

ಡೆಲ್ಲಿಯಲ್ಲಿ 6 ಮಂದಿ ಕೋಟ್ಯಾಧೀಶ್ವರರಿಗೆ ಬೇಡಿ ಹಾಕಿದರು !

ಹೊಸಹೊಸ ಸುದ್ದಿ

ಭಾರತರಕ್ಷಣಾ ಕಾನೂನಿನ ಮೇರೆ 6 ಮಂದಿ ಕೋಟ್ಯಾಧೀಶ್ವರರು ಹಲವು ತಕ್ಸೀರುಗಳಿಗಾಗಿ ದಸ್ತಗಿರಿ ಮಾಡಲ್ಪಟ್ಟು ಕೈ ಬೇಡಿಗಳೊಡನೆ ಕೋರ್ಟಿಗೆ ತರಲ್ಪಟ್ಟರು, ಮ್ಯಾಜಿಸ್ಟ್ರೇಟರು ಇವರನ್ನು ಜಾಮೀನಿನ ಮೇಲೆ ಬಿಟ್ಟರು.

ಬರ್ಲಿನ್ ಪಟ್ಟಣವನ್ನು ಮಿತ್ರ ಸೇನೆಯು ಸುತ್ತುಗಟ್ಟುವಂತಿದೆ. ನಗರದಲ್ಲಿ ಹೊಡೆದಾಟ ನಡೆಯುತ್ತಿದೆ. ಬರ್ಲಿನ್ ಹ್ಯಾಂಬರ್ಗ್ ರಸ್ತೆ ಛೇದಿಸಲ್ಪಟ್ಟು, ಹಾನೋವರ್ ರಸ್ತೆ ಅಗ್ನಿಜ್ವಾಲೆಯಿಂದ ಆವರಿಸಲ್ಪಟ್ಟಿದೆಯೆಂದು ಹೇಳಲಾಗಿದೆ.

ರಷ್ಯಾನು ಖಡಾ ಖಡಿಕಡೆಯುವರೆಗೆ ಯುದ್ಧ ಮಾಡಬೇಕೆಂದೂ, ಇದುವರಿಗೆ ಗೋಪ್ಯವಾಗಿಟ್ಟುಕೊಂಡಿರುವ ಮಹತ್ವವಾದ ಸಹಾಯಸಂಪದವು ಬರ್ಲಿನ್ನಿನ ರಕ್ಷಣೆಗೆ ಅತಿ ಜಾಗ್ರತೆಯಾಗಿಯೇ ಬರುವುದೆಂದೂ ಗೋಬೆಲ್ಸ್ ಬುರುಡೆ ಬಿಟ್ಟಿರುತ್ತಾನೆ.

ನಾರ್ವೆಯಲ್ಲಿ ಭಾರೀ ಜರ್ಮನ್ ಸೈನ್ಯವಿದೆಯೆಂದೂ, ದೊಡ್ಡದೊಡ್ಡ ನಾಜಿಗಳು ಫಾಸ್ಟ್ ಆಡಳಿತದಲ್ಲಿ ಅವಿತುಕೊಂಡಿರುವರೆಂದೂ ಹೇಳಲಾಗಿದೆ.

ಸು. ಸಂ. ಕಾಂಗ್ರೆಸ್ ದಿವಂಗತ ರೂಸ್ವೆಲ್ಟರಿಗೆ ಮರ್ಯಾದೆಯ ಮೆಡಲನ್ನು ಕೊಡುವುದಾಗಿ ವಾಷಿಂಗ್ಟನ್ ಸುದ್ದಿ.

ಅಮೇರಿಕಾ ಲೆಂಡ್ ಲೀಜ್ ಪದ್ಧತಿ ಪ್ರಕಾರ 22500ನೇ ಫ್ರೆಂಚಿಗೆ ಆಯುಧಗಳನ್ನೂ ಸಾಮಗ್ರಿಗಳನ್ನು ಕೊಟ್ಟರು ಪುದಕ್ಕಾಗಿ ಫ್ರೆಂಚ್ ರಿಪಬ್ಲಿಕ್ ರಾಯಭಾರಿ ಜೀ ಪೊನೆಟ್ಟರು ಅಮೇರಿಕಾ ಪದವನ್ನು ಸ್ವೀಕರಿಸಿದ್ದಾರೆ.

ಪಶ್ಚಿಮಣವನ್ನು ಕುರಿತು ಗಡಿನಾಡಿನ ಕಾಂಧಿಯುವರು ಆಡಿಂಸೆ ಚಳವಳಿಗೆ ಆಜ್ಞಯಿಚ್ಚಿದ್ದಾರೆಂದು ಹೇಳಿದ್ದಾರೆ.

ಫ್ರಿಸ್ಕೋ ಸಮ್ಮೇಳನ

ಫ್ರಿಸ್ಕೋ ಸಮ್ಮೇಳನಕ್ಕೆ ಒಡುವ ಪ್ರತಿನಿಧಿಗಳಿಗೆ 'ಗೈಡ್' ಗಳಾಗಿ ಸಹಾಯ ಮಾಡಲು 700 ಹುಡುಗಿಯರು ತರಬೇತು ಮಾಡಲ್ಪಡುತ್ತಿದ್ದಾರೆ.

ಯುದ್ಧದ ವಿರುದ್ಧವಾಗಿ ಒಟ್ಟುಗೂಡುವುದೇ ಈ ಕಾನ್ಫರೆನ್ಸಿನ ಆಶಯವೆಂದು ಮೇಜರ್ ಎಲಿಯಟ್ಟರು ಅಭಿಪ್ರಾಯಪಟ್ಟಿದ್ದಾರೆ.

ಫ್ರಿಸ್ಕೋ ಮುಖ್ಯ ಸಮ್ಮೇಳನವು ನಗರದ ಮಧ್ಯೆಯಿರುವ ಗ್ಯಾಂಡ್ ಅಪೇರ ಹೌಸಿನಲ್ಲಿ ಸೇರುವುದು.

ಪ್ರಪಂಚದ ಶಾಂತಿಗಾಗಿ ರಷ್ಯಪು ಕೇಳಿರುವ ಮೂರು ಪ್ರತ್ಯೇಕ ಮತಗಳಿಗೆ ಬ್ರಿಟನ್ನು ಬೆಂಬಲವಿತ್ತಿದೆಯೆಂದು ಹೇಳಲಾಗಿದೆ.

ಸಮ್ಮೇಳನದಲ್ಲಿ ಭಾರತದ ಪುತವು ಬ್ರಿಟೀಷರಂಗಾಗಲ್ಲವೆಂದೂ ಅದಸ್ನು ಅಂತರಾಷ್ಟ್ರೀಯ ಜವಾಬ್ದಾರಿಗೆ ಬಿಡಲಾಗಿದೆಯೆಂದೂ ಅಲ್ಲಿಂದ ಉತ್ತರವೇನೂ ಬಂದಿಲ್ಲವೆಂದು ಹೇಳಲಾಗಿದೆ.

ಸಮ್ಮೇಳನದಲ್ಲಿ 46 ರಾಷ್ಟ್ರಗಳು ಭಾಗವಹಿಸಲ್ಪಡುವ ಒಂದು ಅಂತರ ರಾಷ್ಟ್ರೀಯ ರಕ್ಷಣಾ ಸಭೆ ಏರ್ಪಡಿಸುವುದಾಗಿ ತಿಳಿಯಬರುತ್ತದೆ.

ಪೌರಸಭೆ ವಿಶೇಷ ಮೀಟಿಂಗು

24 ನೇ ತಾರೀಖು ಸಾಯಂಕಾಲ ಶ್ರೀ ರಾಮಚಂದ್ರ ರಾವ್ ಬಾಂಭೋರೆಯವರ ಅಧ್ಯಕ್ಷತೆಯಲ್ಲಿ ನಡೆದ ಪೌರಸಭೆಯ ವಿಶೇಷ ಸಭೆಯಲ್ಲಿ ನಗರದಲ್ಲಿ ಸಾರೆದ ಆಹಾರ ನಿವಾರಣೆ ಬಗ್ಗೆ ಕೈಗೊಳ್ಳ ಬೇಕಾದ ಕಾರ್ಯಕ್ರಮವು ನಿರ್ಧರಿಸಲ್ಪಟ್ಟಿತು.

ಸೆಲ್ಲೂರಿನಲ್ಲಿ ಒಬ್ಬ ಮುಸ್ಲಿಂ ಹುಡುಗಿಯು ಹಿಂದೂ ಮತಕ್ಕೆ ಸೇರಿ, ಒಬ್ಬ ಪೈತ್ಯಸನ್ನು ವಿವಾಹವಾದಳು.

ವಿವಿಧ ವರ್ತಮಾನ

ಲಂಡನ್ನಿನ ಒಂದು ಸಿನಿಮಾ ಮಂದಿರದಲ್ಲಿ ಗುರುವಾರದ ದಿವಸ 'ಪಡೋಸಿ' ಎಂಬ ಭಾರತ ಚಲನ ಚಿತ್ರ ಪ್ರದರ್ಶಿಸಲಾಗುವುದು. ಬ್ರಿಟನ್ನಿನಲ್ಲಿ ಭಾರತ ಚಲನ ಚಿತ್ರ ಪ್ರದರ್ಶನವು ಇದೇ ಮೊದಲು.

ರಣರಂಗದ ಸುದ್ದಿಗಳು ಬ್ರಿಟಿಷ್ ಸಾರ್ವಭೌಮನಿಗೆ ತಡವಾಗಿ ತಲಪಿಪುತ್ತಿರುವುದರಿಂದ, ಇನ್ನುಮುಂದೆ ಸುದ್ದಿಗಳನ್ನು ತ್ವರೆಯಾಗಿ ತಿಳಿಯುವ ಸಲುವಾಗಿ ಫೋನಿನ ಮೂಲಕ ತಿಳಿಸಬೇಕೆಂದು ಅಪ್ಪಣೆ ಮಾಡಿದ್ದಾರೆ.

ಬ್ರಿಟನ್ನಿಗೆ ಬಿರ್ಮಾ ಅಧಿಕವಾಗಿದೆಯೆಂತಲೂ, ಜಪಾನನ್ನು ಸೋಲಿಸುವುದಕ್ಕಾಗಿ ಇನ್ನೂ ಹೆಚ್ಚಿನತ್ಯಾಗ ಅವಶ್ಯಕವೆಂತಲೂ, ಜಾರ್ಜ್ ಅಂಡರ್ಸನ್ನರು ಕಾರ್ಮನ್ ಸಭೆಯಲ್ಲಿ ಹೇಳಿದರು.

ನೆಹರು ಮತ್ತು ನರೇಂದ್ರ ದೇವರನ್ನು ಒರೈಲಿ ಕಾರಾಗೃಹದಲ್ಲಿಟ್ಟಿರುವರೆಂದೂ ಅಲ್ಲಿ ಓಡಾಡಲು ಕೂಡ ಆಗದಷ್ಟು ಸ್ಥಳ ಕಿರಿದೆಂದೂ, ದೀಪದ ಸೌಕರ್ಯವಿಲ್ಲವೆಂದು ಹೇಳಲಾಗಿದೆ.

ಸಂಸ್ಥಾನದ ಸುದ್ದಿಗಳು

28, 29, 30 ರಲ್ಲಿ ತುಮಕೂರಿನಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆಯು ನಡೆಯುವುದು.

ಪರೀಕ್ಷೆಯಲ್ಲಿ ನಾಪಾಸು ಆದುದರಿಂದ ಚಿತ್ರದುರ್ಗದಲ್ಲಿ ರಾಜಚಂದ್ರನೆಂಬವನು ನೈಲುತುತ್ತದ ದ್ರವಣವನ್ನು ಕುಡಿದು ಆಸ್ಪತ್ರೆಗೆ ಸೇರಿಸಲ್ಪಟ್ಟನು.

ಊಟಿಯಲ್ಲಿ ದಿವಾನ್ ಮತ್ತು ಡಾಕ್ಟರ್ ರತ್ನಸ್ವಾಮಿಯವರ ಭೇಟಿಗು ವೇಳೆ ಎರಡನೇ ವಾರದಲ್ಲಿ ನಡೆದ ಮೈಸೂರು ಫೆಡರೇಶನ್ನಿಗೆ ಸೇರುವ ವಿಷಯವನ್ನು ಚರ್ಚಿಸುವರು.

ಭಗವತ್ ಪ್ರತಿಜ್ಞೆ

ಮಾರ್ಕಂಡೇಯ, ಸಾವಿತ್ರಿ-ಸತ್ಯವಾನ್ ಮೊದಲಾದವರ ಚರಿತ್ರೆಗಳು ಪುರಾಣಗಳಲ್ಲಿ ಹೇಳಿವೆ. ಇವುಗಳನ್ನು ಓದಿ ಕೇಳದೇ ಇರುವವರು ಯಾರೂ ಇಲ್ಲವೆನ್ನಬಹುದು. ಅವರುಗಳಿಗೆ ಪರಮಾತ್ಮನಲ್ಲಿ ಇರತಕ್ಕ ಅಚಲಭಕ್ತಿಗಾಗಿ ಕೆಲವರು ಅನಂದಿಸುವರು, ಇನ್ನು ಕೆಲವರು ಇವೆಲ್ಲಾ ಕಟ್ಟುಕತೆ, ಇವನ್ನೆಲ್ಲಾ ನಿಜವೆನ್ನೋಣವೇ ಎನ್ನುವರು.

ಆದರೆ ಇದೇ ತಿಂಗಳಲ್ಲಿ ತಿರುಪತಿಯಲ್ಲಿ ನಡೆದ ಒಂದು ವಿಚಿತ್ರ ಘಟನೆಯು ಹೀಗಿದೆ.—

ನಾಗಪುರದ ಕಡೆಯವರು, ಸಾಧಾರಣ ಶ್ರೀಮಂತರು. ಅವರ ಒಟ್ಟನೇ ಒಬ್ಬ ಮಗನಿಗೆ ಹನ್ನೊಂದನೆಯ ವಯಸ್ಸಿನಲ್ಲಿ ಕಂಟಕವಿರುವುದಾಗಿಯೂ ತೀರ್ಥಯಾತ್ರೆ ದೇವಭಕ್ತಿ ಇತ್ಯಾದಿ ನಡೆಸಬೇಕೆಂದೂ ಜೋಯಿಸರು ಕೆಲವರು ಹೇಳಿದ್ದರಂತೆ.

ಅದಕ್ಕನುಸಾರವಾಗಿ ಗಂಡಹೆಂಡತಿಯರಿಬ್ಬರೂ ತಮ್ಮ ಹನ್ನೊಂದು ವರ್ಷ ವಯಸ್ಸಿನ ಹುಡುಗನನ್ನು ಬಹಳ ಅಕ್ಕರೆಯಿಂದ ಒಂದು ಕ್ಷಣವೂ ಅಗಲಿ ಇರದೇ ಸದಾ ಉಷ್ಣೋಷ್ಣಾರಿಯಲ್ಲಿಯೇ ಅನೇಕ ತೀರ್ಥ ಕ್ಷೇತ್ರಗಳನ್ನು ಸಂಚಾರ ಮಾಡಿದರು. ತಿರುಪತಿಗೂ ಒಂದರು. ತಮ್ಮ ಮಗನನ್ನು ಬಹಳ ಕಷ್ಟಪಟ್ಟಾದರೂ ಹೆಗಲ ಮೇಲೆ ಕೂರಿಸಿಯೇ ಬೆಟ್ಟವನ್ನು ಹತ್ತಿದರು. ದೇವರ ದರ್ಶನ ಮಾಡಿ ಮಗನ ದೀರ್ಘಾಯುಸ್ಸಿಗಾಗಿ ಪರಮಾತ್ಮನಲ್ಲಿ ಪ್ರಾರ್ಥಿಸಿದರು.

ಮಾರನೆಯ ದಿನ ಬೆಳಿಗ್ಗೆ ಬೆಟ್ಟದ ಮೇಲೆ ದೇವಸ್ಥಾನದ ಪಕ್ಕದಲ್ಲಿಯೇ ಇರುವ ಸ್ವಾಮಿ ಪುಷ್ಕರಣಿ ತೀರ್ಥದಲ್ಲಿ ಸ್ನಾನ ಮಾಡಲು ಹೋದರು. ನೀ

ರಿನಲ್ಲಿಯೇ ಅಪಾಯ ಸಂಭವಿಸಬಹುದೆಂದು ಜೋಯಿಸರು ಭವಿಷ್ಯ ನುಡಿದ್ದರಿಂದ ಅದಕ್ಕಾಗಿ ತಂದೆಯು ಮಗನ ಕೈಯನ್ನು ಬಿಡಲೇ ಇಲ್ಲ. ಮಗನಿಗೆ ಮೊಳಕಾಲಿನಷ್ಟು ನೀರಿನಲ್ಲಿ ನಿಲ್ಲಿಸಿ ತಾನೇ ಬೆನ್ನು ಹಿಡಿದು ಸ್ನಾನ ಮಾಡಿಸುತ್ತಿದ್ದನು. ಮಗನ ಕೈಯಲ್ಲಿ ಯಾವುದೋ ಒಂದು ಪದಾರ್ಥವಿದ್ದಿತು. ನೀರು ತಗುಲಿದಾಗ ಬಹುದೆಂದು ಮಗನ ಕೈಯಿಂದ ಅದನ್ನು ತೆಗೆದು ಸೋಪಾನದ ಮೇಲೆ ಇಟ್ಟನು. ಹಾಗೆ ಅದನ್ನು ತೆಗೆದಿಡುವಾಗ ಮಗನ ಕೈಯನ್ನು ಬಿಡಬೇಕಾಯಿತು. ಅಷ್ಟರಲ್ಲಿಯೇ ಮಗನು ನೀರಿಗೆ ಜಿದ್ದೇಬಿಟ್ಟನು. ಮಗನು ನೀರಿನಲ್ಲಿ ಮುಳುಗಿರುವುದನ್ನು ನೋಡಿದ ತಾಯಿಯು, ಇದ್ದ ಒಬ್ಬ ಮಗನನ್ನು ಕಳಕೊಂಡು ಬದುಕಿರಬಾರದೆಂದು ತಾನು ನೀರಿಗೆ ಧುಮುಕಿದಳು. ಇಷ್ಟರೊಳಗಾಗಿ ನೀರಿಗೆ ಬಿದ್ದ ಹುಡುಗನು ಎರಡು ಮೂರು ನೂರಿನಷ್ಟು ದೂರಹೋಗಿ ಕೈಗೆ ಸಿಕ್ಕದಂತಾದನು. ಹೆಂಡತಿಯು ಹೆಚ್ಚುದೂರ ಹೋಗಿರಲಿಲ್ಲವಾದ ಕಾರಣ ಗಂಡನು ಅಕೆಯ ಜುಟ್ಟನ್ನು ಹಿಡಿದೆಳೆದು ಸೋಪಾನದ ಮೇಲೆ ಹಾಕಿದನು. ನೂರಾರು ಜನಗಳು ಅಲ್ಲಿಯೇ ಇದ್ದರಾದರೂ ಯಾರೂ ಯಾವ ಪ್ರಯತ್ನವನ್ನೂ ಮಾಡಲಿಲ್ಲ. ಅಷ್ಟರೊಳಗಾಗಿ ನಾಲ್ಕೈದು ಮಾರು ದೂರದ ನೀರಿನಲ್ಲಿ ಮುಳುಗೇಳು ತ್ತಿದ್ದ ಹುಡುಗನನ್ನು ಯಾರೋ ಒಬ್ಬ ಹುಡುಗನು ದಡಕ್ಕೆ ತಂದು ಸೋಪಾನದ ಬಳಿ ನಿಂತಿರುವ ಆ ಮುದಿ ದಂಪತಿಗಳ ವಶಕ್ಕೆ ಕೊಟ್ಟನು. ಹುಡುಗನ ಅವೈಕೆ ವಿಷಯವಾಗಿ ಜನಗಳು ತಮ್ಮ ತಮ್ಮ ಸೂಚನೆಗಳನ್ನು ಕೊಡುವ ಸಮಯದಲ್ಲಿ, ತಂದು ಕೊಟ್ಟ ಹುಡುಗನು ಅಲ್ಲಿಯೇ ಅಲ್ಲಿಯೇ ಮಾಯವಾದನು. ಜನಗಳಿಗೆಲ್ಲಾ ಆಶ್ಚರ್ಯವಾಯಿತು. ಯಾತ್ರಿಕನು, ತನ್ನ ಮಗನನ್ನು ತಂದು ಕೊಟ್ಟ ಹುಡುಗನು ತನಗೆ ಪುನಃ ಸಿಕ್ಕಬೇಕೆಂದೂ ಆತನಿಗೆ ತಕ್ಕ ಸಂಭಾವನೆ ಮಾಡುವುದಾಗಿಯೂ ಅಲ್ಲಿಲ್ಲಾ ಬಹಳವಾಗಿ ಸಾರಿದನು. ಆ ಹುಡುಗನು ಸಿಕ್ಕಲೇ ಇಲ್ಲ. ಭಗವಂತನೇ ತನ್ನ ಮಗನನ್ನು ರಕ್ಷಿಸಿದನೆಂದು ತಿಳಿದು ತಿರುಪತಿಯಲ್ಲಿಯೇ ದೇವರಿಗೆ ನಾನಾವಿಧ ಸೇವೆಗಳನ್ನು ನಡೆಸುತ್ತಾ ಅಲ್ಲಿಯೇ ಇದ್ದನು. ಪ್ರಾಯಶಃ ಈಗಲೂ ಅಲ್ಲಿಯೇ ಇರುವ ಹಾಗಿದೆ. ಇದು ನಡೆದಿರುವುದು ಇದೇ ತಿಂಗಳು ಎರಡನೆಯ ತಾರೀಖಿನ ದಿನ.

" ಅನನ್ಯಾಶ್ಚಿಂತಯಂತೋಮಾಂ
ಯೇಜನಾಃ ಪರ್ಯುಪಾಸತೇ | ತೇಷಾಂ ನಿತ್ಯಾಭಿಯುಕ್ತಾನಾಂ ಯೋಗ
ಕ್ಷೇಮಂ ವಹಾಮ್ಯಹಂ ॥ ,,

ಇದಲ್ಲವೇ ಪರಮಾತ್ಮನ ಅಭಯವಾಣಿ !

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು
— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಬಟ್ಟೆಗೆ ಆದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ ;
ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ ;
ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.



ಮೈಸೂರು
ಕಾರ್ಪೊರೇಷನ್
ಕೆರಿಸಲು [illegible] ಅನ್ನು
[illegible] ಮಾರಿಸುವುದು

ಗಾರ್ವಮೆಂಟ್ ಸೋಪ್ ಫ್ಯಾಕ್ಟರಿ, [illegible]

AT OPERA — 2 ನೇ ವಾರ

POOMPAVAI

' ಪೂಂಪಾವೈ '

ಪಾತ್ರ - ರಾಮಸ್ವಾಮಿ, ಜೀವರತ್ನಂ, ಮಧುರಾ, ಕೃಷ್ಣಕ್

MorningShows, From 27—4—45 YOUNG TOM EDISON

From 20—4—45

At Ranjit

Police

ಪ್ರೇಂ ಅದಿಬ್ — ರತ್ನಮಾಲಾ
ರಂಜಿತ್ — ಜೀವನ್
ಮುಂತಾದವರು ಪಾತ್ರವಹಿಸಿರುವ

ಪೊಲೀಸ್

(ಹಿಂದಿ)

Edited, Printed and published by M. S. Krishna Rao, at the Satvavadi Press, Chamareja Agrahar, Mysore



ಐ.ಜೆ. ಹಾಲ್, ಸರಾಫ್ ಅಂಗಡಿ
ರಸ್ತೆ ಬೀದಿ, ಮೈಸೂರು



ಬ್ರಿಟಿಷ್ ಸೈನಿಕರು ಅಬ್ಸಿನಿಯಾದಲ್ಲಿ ಇಳಿದಿರುವುದು